**ದಿನಾಂಕಃ 20.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 2 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.HKR ರವರಿಂದಃ**

1) ಯಾವ ಅಪಘಾತದಲ್ಲಿ ನನ್ನ ಗಂಡನು ಗಾಯಗೊಂಡು ಮರಣ ಹೊಂದಿದ್ದಾರೋ ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ. ಈ ಅಪಘಾತಕ್ಕೆ ಸಂಬಂಧಪಟ್ಟ ಹಾಗೆ ದೂರನ್ನು ಪೋಲಿಸರಿಗೆ ನನ್ನ ಗಂಡನ ಅಣ್ಣನು ನೀಡಿದ್ದಾರೆ. ಅಪಘಾತಕ್ಕೆ ಸಂಬಂಧಪಟ್ಟ ಹಾಗೆ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಅಪಘಾತದ ಸಮಯದಲ್ಲಿ ನನ್ನ ಗಂಡನು ಚಾಲನೆ ಮಾಡುತ್ತಿದ್ದಂತಹ ದ್ವಿಚಕ್ರ ವಾಹನವು ನನ್ನ ಹೆಸರಿನಲ್ಲಿ ಇದೆ. ಅಪಘಾತದ ಸಮಯದಲ್ಲಿ ಸದರಿ ಮೋಟರ್ ಸೈಕಲ್ ಗೆ ವಿಮಾ ಪಾಲಿಸಿಯನ್ನು ಪಡೆದುಕೊಳ್ಳಲಾಗಿತ್ತೋ ಅಥವಾ ಇಲ್ಲವೋ ಎಂದು ಹೇಳಲು ಗೊತ್ತಾಗುವುದಿಲ್ಲ. ನನ್ನ ಗಂಡನು ಚಾಲನೆ ಮಾಡುತ್ತಿದ್ದ ಮೋಟರ್ ಸೈಕಲ್ ಗೆ ಸಂಬಂಧಿಸಿದಂತಹ ವಿಮಾ ಸಂಸ್ಥೆಯಿಂದ ನಾವು ಯಾವುದಾದರೂ ಹಣವನ್ನು ಪಡೆದುಕೊಂಡಿದ್ದೇವೋ ಹೇಗೆ ಎಂದರೆ ಆ ಬಗ್ಗೆ ಅರ್ಜಿಯು ನಡೆಯುತ್ತಾ ಇದೆ.

2) ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಅನುಮತಿ ನೀಡುವಂತಹ ಚಾಲನಾ ಪರವಾನಗಿಯು ನನ್ನ ಗಂಡನ ಬಳಿ ಇರಲಿಲ್ಲ. ಅಪಘಾತದ

ಸಮಯದಲ್ಲಿ ನನ್ನ ಗಂಡನು ಹೆಲ್ಮೆಟ್ ಹಾಕಿಕೊಂಡಿದ್ದರು ಎನ್ನುವ ಬಗ್ಗೆ ಯಾವುದಾದರೂ ಪೋಲಿಸ್ ದಾಖಲೆಗಳಲ್ಲಿ ನಮೂದು ಇದೆಯೋ ಇಲ್ಲವೋ ಎಂದರೆ ನನ್ನ ಗಂಡನು ಹೆಲ್ಮೆಟ್ ಹಾಕಿಕೊಂಡಿದ್ದರು.

3) ಅಪಘಾತದ ನಂತರ ವೈದ್ಯರು ನನ್ನ ಗಂಡನ ಮೃತದೇಹದಿಂದ ರಕ್ತವನ್ನು ತೆಗೆದುಕೊಂಡು **FSL** ಗೆ ಕಳುಹಿಸಿಕೊಟ್ಟಿದ್ದಾರೋ ಅಥವಾ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಪಿ.ಎಂ. ವರದಿಯಲ್ಲಿ ಯಾವ ಕಾರಣದಿಂದ ನನ್ನ ಗಂಡನ ಸಾವು ಸಂಭವಿಸಿದೆ ಎಂದು ನಮೂದು ಇರುವುದಿಲ್ಲ ಮತ್ತು ಆ ಕಾರಣದಿಂದ **FSL** ನಿಂದ ವರದಿಯನ್ನು ಪಡೆದು ನನ್ನ ಗಂಡನ ಸಾವಿಗೆ ನಿಜವಾದ ಕಾರಣ ಏನು ಎಂಬ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇದೆಯೋ ಹೇಗೆ ಎಂದರೆ ನನಗೆ ಅದೆಲ್ಲಾ ತಿಳಿಯುವುದಿಲ್ಲ.

4) ಅಪಘಾತ ಆದ ದಿನದಂದು ನನ್ನ ಗಂಡನು ಮದ್ಯಪಾನ ಮಾಡಿದ್ದರು ಮತ್ತು ಆ ಅಮಲಿನಲ್ಲಿ ತಾವೇ ಬಿದ್ದು ಗಾಯ ಮಾಡಿಕೊಂಡಿದ್ದಾರೆ ಮತ್ತು ಆ ಸತ್ಯ ಸಂಗತಿಯು ನ್ಯಾಯಾಲಯದ ಗಮನಕ್ಕೆ ಬಂದು ಬಿಡುತ್ತದೆ ಎಂಬ ಕಾರಣದಿಂದ ನನ್ನ ಗಂಡನ ಸಂಪೂರ್ಣ ಶವ ಪರೀಕ್ಷಾ ವರದಿಯನ್ನು ಮತ್ತು ಎಫ್.ಎಸ್.ಎಲ್ ವರದಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು.

5) ಕೇವಲ ಪರಿಹಾರವನ್ನು ಪಡೆಯಬೇಕು ಎಂಬ ಉದ್ದೇಶದಿಂದ **1** ನೇ ಎದುರುದಾರರ ಕಾರಿನ ವಿರುದ್ಧ ಸುಳ್ಳು ಪ್ರಕರಣವನ್ನು ಮಾಡಿದ್ದೇವೆ ಮತ್ತು ಪೋಲಿಸರು ಮತ್ತು ನಾವು ಮತ್ತು **1** ನೇ ಎದುರುದಾರರು ಎಲ್ಲರೂ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸುಳ್ಳು.

6) ಕೆಎ**-14-**ಎಂಎ**-3116** ಸಂಖ್ಯೆಯ ಕಾರಿಗು ಮತ್ತು ನನ್ನ ಗಂಡನ ಸಾವಿಗು ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸುಳ್ಳು.

7) ನನ್ನ ಗಂಡನ ಅಂತ್ಯಕ್ರಿಯೆ ಮತ್ತು ವೈಕುಂಠ ಸಮಾರಾಧನೆ ಇತ್ಯಾದಿಗಳಿಗೆ **2** ಲಕ್ಷ ರೂಪಾಯಿಗಳು ಖರ್ಚು ಆಗಿದೆ ಎಂಬುದಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

8) ನನ್ನ ಗಂಡನು ಓರ್ವ ಮಹಾಂತೇಶ್ ಎನ್ನುವವರ ಬಳಿ ಕೆಲಸ ಮಾಡುತ್ತಿದ್ದರು ಮತ್ತು ನನ್ನ ಗಂಡನಿಗೆ ಒಂದು ತಿಂಗಳಿಗೆ **60** ಸಾವಿರ ರೂಪಾಯಿಗಳಷ್ಟು ಆದಾಯ ಇತ್ತು ಎನ್ನುವ ಬಗ್ಗೆ ದಾಖಲೆಗಳು ಇವೆ ಮತ್ತು ಆ ದಾಖಲೆಗಳನ್ನು ಹಾಜರುಪಡಿಸುತ್ತೇನೆ.

9) ನನ್ನ ಗಂಡನು **10** ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದರು. ನನ್ನ ಗಂಡನ ಜನ್ಮ ದಿನಾಂಕಕ್ಕೆ ಸಂಬಂಧಪಟ್ಟ ಹಾಗೆ ಆತನ ಎಸ್.ಎಸ್.ಎಲ್.ಸಿ

ಅಂಕಪಟ್ಟಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ.

10) ಸಾಯುವ ಸಮಯದಲ್ಲಿ ನನ್ನ ಗಂಡನಿಗೆ **45** ವರ್ಷಕ್ಕಿಂತ ಹೆಚ್ಚಿನ ವಯಸ್ಸು ಆಗಿತ್ತು ಮತ್ತು ನನ್ನ ಗಂಡನ ವಯಸ್ಸನ್ನು ನಾನು ಕಡಿಮೆ ಹೇಳುತ್ತಿದ್ದೇನೆ ಎಂದರೆ ಸುಳ್ಳು. ನನ್ನ ಗಂಡನಿಗೆ ಯಾವುದೇ ಉದ್ಯೋಗ ಅಥವಾ ಸಂಪಾದನೆ ಇರಲಿಲ್ಲ ಮತ್ತು ಕೇವಲ ಹೆಚ್ಚಿನ ಪರಿಹಾರ ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ನನ್ನ ಗಂಡನಿಗೆ ಒಂದು ತಿಂಗಳಿಗೆ **60** ಸಾವಿರ ರೂಪಾಯಿ ಆದಾಯ ಇತ್ತು ಎಂಬುದಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

11) ನಮ್ಮ ಬಳಿ ಬಿ.ಪಿ.ಎಲ್ ಪಡಿತರ ಚೀಟಿ ಇದೆ. ನಮ್ಮ ಪಡಿತರ ಚೀಟಿಯಲ್ಲಿ ನನ್ನ ಹೆಸರು, ನನ್ನ ಗಂಡನ ಹೆಸರು ಮತ್ತು ನನ್ನ ಗಂಡನ ತಾಯಿಯ ಹೆಸರು ಇತ್ತು. ನನ್ನ ಮಕ್ಕಳ ಶಾಲಾ ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

12) ಮದ್ಯಪಾನ ಮಾಡಿ ನನ್ನ ಗಂಡನು ಅದರ ಅಮಲಿನಲ್ಲಿ ಅಪಘಾತ ಮಾಡಿಕೊಂಡಿದ್ದಾರೆ ಮತ್ತು ಆ ಕಾರಣದಿಂದ ನಾವು ಯಾವುದೇ ಪರಿಹಾರವನ್ನು ಪಡೆಯಲು ಅರ್ಹರು ಆಗಿರುವುದಿಲ್ಲ ಎಂದರೆ ಸುಳ್ಳು.

**<u>ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದಃ</u>**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.